ಸೆಲೆಬ್ರಿಟಿ

■ ಹನಿ

## 'ಬಾಂಡ್' ತಾಪತ್ರಯ



**ಜೇ**ಮ್ಸ್ ಬಾಂಡ್ ಸಿನಿಮಾಗಳಿಗೆ ಈಗ 50ರ ವಯಸ್ಸು. 1962ರಲ್ಲಿ 'ಡಾಕ್ಟರ್ ನೋ' ಬಾಂಡ್ ಸಿನಿಮಾ ತೆರೆಗೆ ಬಂದ ಬಳಿಕ ಈವರೆಗೆ 32 ಬಾಂಡ್ ಸಿನಿಮಾಗಳು ತೆರೆ ಕಂಡಿವೆ. 33ನೇ ಬಾಂಡ್ ಸಿನಿಮಾ 'ಸ್ಕೈ ಫಾಲ್' ಚಿತ್ರೀಕರಣ ನಿಧಾನಕ್ಕೆ ನಡೆದಿದೆ. ನಟ ಡೇನಿಯಲ್ ಕ್ರೇಗ್ 'ಬಾಂಡ್' ಆಗಿ ನಟಿಸಿರುವ 'ಸ್ಕೈ ಫಾಲ್'ನ ಎರಡು ಟ್ರೈಲರ್‌ಗಳು ಇಂಟರ್‌ನೆಟ್‌ನಲ್ಲಿ ಹರಿದಾಡುತ್ತಿವೆ. ಹೊಸ ಚಿತ್ರಕ್ಕೆ ಎಡಿಲ್ ಹಾಡಿರುವ ಟೈಟಲ್ ಸಾಂಗ್ ಕೂಡಾ ಜನಪ್ರಿಯಗೊಂಡಿದೆ. ಡೇನಿಯಲ್ ಕ್ರೇಗ್ ಬಾಂಡ್ ಆಗಿ ನಟಿಸುತ್ತಿರುವ ಮೂರನೇ ಸಿನಿಮಾ ಇದು. ಸ್ಫೋಟಗೊಂಡ ಟ್ರೈನ್‌ನ ಮೇಲೆ ಡೇನಿಯಲ್ ಕ್ರೇಗ್ ಧುಮುಕುವ ದೃಶ್ಯ ಅದ್ಭುತವಾಗಿ ಮೂಡಿಬಂದಿದೆ. ಹಾಲಿವುಡ್‌ನಲ್ಲಿ 'ಹ್ಯಾರಿ ಪಾಟರ್' ಸರಣಿ ಸಿನಿಮಾಗಳನ್ನು ಬಿಟ್ಟರೆ ಈವರೆಗೆ ಅತ್ಯಧಿಕ ಹಣ ದೋಚಿರುವ ಸರಣಿ ಸಿನಿಮಾಗಳೆಂದರೆ ಬಾಂಡ್‌ನದ್ದೇ. 32 ಬಾಂಡ್ ಸಿನಿಮಾಗಳು ಈಗಾಗಲೆ ಒಟ್ಟು ಐದು ಶತಕೋಟಿ ಡಾಲರ್ ಹಣವನ್ನು ಗಳಿಸಿವೆಯಂತೆ.

ಸದ್ಯಕ್ಕೆ ಬಾಂಡ್ ಪಾತ್ರಗಳಲ್ಲಿ ಜನಪ್ರಿಯನಾಗಿರುವ ಡೇನಿಯಲ್, ವೈಯಕ್ತಿಕವಾಗಿ ತಮಾಷೆಯ ಮನುಷ್ಯ. ಗಾಂಭೀರ್ಯ ಏನಿದ್ದರೂ ತೆರೆಯ ಮೇಲಷ್ಟೇ. 'ಈ ಸೆಲೆಬ್ರಿಟಿ ಸ್ಟೇಟಸ್ ಸಾಕಾಗಿದೆ ಕಣ್ರೀ. ಎಲ್ಲ ಸಾಮಾನ್ಯ ಮನುಷ್ಯರಂತೆ ಒಂದು ಬಾರ್‌ಗೆ ಹೋಗಿ ಕಂಠಮಟ್ಟ ಕುಡಿಯಲು ಆಗಲ್ಲ; ತೂರಾಡುವುದಂತೂ ಸಾಧ್ಯವೇ ಇಲ್ಲ' ಎಂದಾತ ಇತ್ತೀಚೆಗೆ ನೀಡಿರುವ ಹೇಳಿಕೆ ಚರ್ಚೆಗೆ ಗ್ರಾಸವಾಗಿದೆ. 'ಈಗ ಎಲ್ಲರ ಕೈಯಲ್ಲೂ ಕ್ಯಾಮರಾ ಇದೆ. ನಾನೇನಾದರೂ ಹಾಗೆ ಮಾಡಿದರೆ ನನ್ನ ಕಥೆ ಅಷ್ಟೇ..' ಎಂದೂ ಆತ ತನ್ನನ್ನೇ ತಮಾಷೆ ಮಾಡಿಕೊಂಡಿದ್ದಾನೆ. ಜನಪ್ರಿಯತೆ ಪುಕ್ಕಟೆ ಬರೋದಿಲ್ಲ ಅನ್ನೋದು ಎಷ್ಟೊಂದು ನಿಜ! ಅದಕ್ಕಾಗಿ ಸಾಕಷ್ಟು ವ್ಯಕ್ತಿಗತ ಆಸೆಗಳನ್ನು ಕೈಬಿಡಲೇಬೇಕು.

2006ರಿಂದಲೂ ಜೇಮ್ಸ್ ಬಾಂಡ್ ಆಗಿ ನಟಿಸುತ್ತಿರುವ ಕ್ರೇಗ್, ಕಳೆದ ವರ್ಷ 'ಕ್ವಾಂಟಮ್ ಆಫ್ ಸೊಲೇಸ್'ನಲ್ಲಿ ನಟಿಸಿದ್ದಾಗ, 'ಈತ ಬಾಂಡ್ ಸಿನಿಮಾಗಳಿಗೆ ಫಿಟ್ ಆಗಿರುವ ವ್ಯಕ್ತಿಯಲ್ಲ' ಎಂದು ಟೀಕಿಸಿದವರೂ ಇದ್ದರು. ಆದರೆ ಸಮುದ್ರದಿಂದ ಬರಿ ಚಡ್ಡಿಯಲ್ಲಿ ಎದ್ದು ಬರುವ ದೃಶ್ಯದಲ್ಲಿ ಮೈಕಟ್ಟಿನ ಪ್ರದರ್ಶನ ತೋರಿದ ಡೇನಿಯಲ್, ಟೀಕಾಕಾರರ ಬಾಯಿ ಮುಚ್ಚಿಸಿದ. ಸಿನಿಮಾಕ್ಕೆ ಅಗತ್ಯ ಬಿದ್ದರೆ ಎಂತಹ ಕಠಿಣ ಡಯಟಿಂಗ್‌ಗೂ ಸಿದ್ಧ ಎಂಬುದನ್ನೂ ಆತ ಅದಾಗಲೇ ತೋರಿಸಿದ್ದ. ಈತನ ಮೊದಲ ಬಾಂಡ್ ಚಿತ್ರ 'ಕ್ಯಾಸಿನೋ ರೋಯೇಲ್' ವೇಳೆಗೆ ಈತನ ಕಠಿಣ ಡಯಟ್ ಸಾಕಷ್ಟು ಸುದ್ದಿ ಮಾಡಿತ್ತು. ಬೆಳಿಗ್ಗೆ ನಾಷ್ಟಾಕ್ಕೆ 2 ಮೊಟ್ಟೆ, 2 ಟೋಸ್ಟ್; ಒಂದು ಗಂಟೆ ಬಿಟ್ಟು ಹಣ್ಣು ಮತ್ತು ನಟ್ಸ್‌ಗಳ ಪ್ರೊಟೀನ್ ಶೇಕ್; ಮಧ್ಯಾಹ್ನ ಮೀನು ಮಾಂಸದ ಜತೆಗೆ ಸ್ವಲ್ಪ ರೈಸ್; ರಾತ್ರಿ ಡಿಟ್ಟೋ– ಹೀಗೆ ಆಗ ಈತ ಕಠಿಣ ಆಹಾರಾಭ್ಯಾಸ ರೂಢಿಸಿಕೊಂಡಿದ್ದ. ವಾರಕ್ಕೆ ಎರಡು ದಿನ ಮಾತ್ರ ಗುಂಡು ಹಾಕುತ್ತಿದ್ದ. ಈಗಲೂ ಈತ ತನ್ನ ಮೈಕಟ್ಟನ್ನು ಉಳಿಸಿಕೊಳ್ಳಲು ಸಾಕಷ್ಟು ಸರ್ಕಸ್ ಮಾಡುತ್ತಿದ್ದಾನೆ. ಹೊಟ್ಟೆ ತುಂಬ ತಿಂದರೂ, ಮಧ್ಯಾಹ್ನ 2 ಗಂಟೆಯ ಬಳಿಕ ಸಕ್ಕರೆ ಹೊಂದಿದ ತಿಂಡಿ ತಿನ್ನುವುದಿಲ್ಲ. ಸಂಜೆ 5 ಗಂಟೆಯ ಬಳಿಕ ರೈಸ್, ಆಲೂಗಡ್ಡೆ, ಬ್ರೆಡ್ ಮುಟ್ಟೋದಿಲ್ಲ. ಎಂಜಿಎಂ ಸಂಸ್ಥೆಯ ಹಣಕಾಸು ಮುಗ್ಗಟ್ಟಿನಿಂದ 'ಸ್ಕೈ ಫಾಲ್'ನ ಶೂಟಿಂಗ್ ನಿಧಾನವಾಗಿದ್ದರೂ ಈತ ಬೇಸರಗೊಂಡಿಲ್ಲವಂತೆ. ಅದರ ನಡುವೆ ಬೇರೆ ಸಿನಿಮಾವೊಂದರಲ್ಲೂ ನಟಿಸಿ ಬಂದ.

---

## ಸಚಿನ್ 'ಟಾಟಾ'?



**ಇ**ದೇ ಮೊದಲ ಬಾರಿಗೆ ಸಚಿನ್ ತೆಂಡೂಲ್ಕರ್ ಕ್ರಿಕೆಟ್‌ನಿಂದ ಸಂಪೂರ್ಣ ನಿವೃತ್ತಿಯ ಬಗ್ಗೆ ಮಾತನಾಡಿದ್ದಾನೆ. ಟೀವಿ ಚಾನೆಲ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ 'ನಾನು ನನ್ನ ಹೃದಯದ ಮಾತು ಕೇಳುವವನು. ಸದ್ಯಕ್ಕೆ ಹೃದಯ ಓಕೆ ಎನ್ನುತ್ತಿದೆ. ಆದರೆ ಮುಂದಿನ ತಿಂಗಳು ಇಂಗ್ಲೆಂಡ್ ಕ್ರಿಕೆಟ್ ತಂಡ ಪ್ರವಾಸಕ್ಕೆ ಬಂದ ಬಳಿಕ ಮತ್ತೆ ನನ್ನ ಭವಿಷ್ಯದ ನಡೆಯ ಬಗ್ಗೆ ಆಲೋಚಿಸಬೇಕಿದೆ' ಎಂದಿದ್ದಾನೆ. ಟೀಕಾಕಾರರಿಗೆ ಇದು ನಿವೃತ್ತಿಯ ಸೂಚನೆಯಂತೆ ಕೇಳಿಸಿದ್ದರೆ, ಅಭಿಮಾನಿಗಳಿಗೆ ಹೃದಯ ಬಿರಿಯುವಂತಾಗಿದೆ. ಅಂತರ್ಜಾಲ ತಾಣಗಳಲ್ಲಿ ಪರ– ವಿರೋಧ ಟೀಕೆ, ಟಿಪ್ಪಣಿಗಳ ಪ್ರವಾಹ ಮುಂದುವರಿದಿದೆ.

ಈಗಾಗಲೆ ಟ್ವೆಂಟಿ–20 ಕ್ರಿಕೆಟ್‌ನಿಂದ ಸಚಿನ್ ನಿವೃತ್ತಿ ಆಗಿಯಾಗಿದೆ. ಒಂದು ದಿನದ ಕ್ರಿಕೆಟ್‌ನಲ್ಲೂ ಸಚಿನ್ ಎಲ್ಲ ಪಂದ್ಯಗಳಲ್ಲಿ ಭಾಗವಹಿಸುತ್ತಿಲ್ಲ. ಸದ್ಯಕ್ಕೆ ಟೆಸ್ಟ್ ತಂಡದಲ್ಲಿ ಮಾತ್ರ ಆಟವಾಡುತ್ತಿದ್ದಾನೆ. ಆಗಸ್ಟ್‌ನಲ್ಲಿ ನ್ಯೂಜಿಲೆಂಡ್ ತಂಡದ ಜತೆ ಆಟವಾಡಿದಾಗ ಮೂರು ಸಲವೂ ಸಚಿನ್ ವೇಗದ ಬೌಲಿಂಗಿಗೆ 'ಬ್ಯಾಟ್ ಆ್ಯಂಡ್ ಪ್ಯಾಡ್' ಆಗಿರುವುದನ್ನು ನೋಡಿದವರು 'ಕ್ರಿಕೆಟ್ ದೇವರಿಗೆ ವಯಸ್ಸಾಗಿದೆ' ಎಂದು ನಿಟ್ಟುಸಿರು ಬಿಟ್ಟಿದ್ದಾರೆ. 'ಹೀಗೆಯೇ ಆಟವಾಡುತ್ತಲೇ ಇರಬೇಕೆಂಬ ಇರಾದೆ ನನಗಿಲ್ಲ. ಮನಸ್ಸಿನ ಸ್ಥಿತಿ ಮತ್ತು ದೈಹಿಕ ಕ್ಷಮತೆ ಇರುವವರೆಗೆ ಆಟ ಮುಂದುವರಿಸಬಹುದು. ನನಗೂ ಈಗ 39 ಆಯಿತಲ್ಲ..' ಎಂದು ಸಚಿನ್ ಹೇಳಿರುವುದನ್ನು ನೋಡಿದರೆ ನಿವೃತ್ತಿಯ ದಿನಗಳು ಹತ್ತಿರದಲ್ಲೇ ಇವೆ ಎನ್ನುವುದು ಸ್ಪಷ್ಟ. ಟೆಸ್ಟ್‌ನಲ್ಲಿ 51 ಸೆಂಚುರಿ, 'ಒನ್ ಡೇ' ಪಂದ್ಯಗಳಲ್ಲಿ 49 ಸೆಂಚುರಿ, ಟೆಸ್ಟ್‌ಗಳಲ್ಲಿ ಒಟ್ಟು 15,533 ರನ್, ಒನ್ ಡೇ ಪಂದ್ಯಗಳಲ್ಲಿ ಒಟ್ಟು 18426 ರನ್– ಹೀಗೆ ಯಾರೂ ಮುರಿಯುವ ಸಾಧ್ಯತೆಯೇ ಕಾಣಿಸದಿರುವಂತಹ ಹತ್ತಾರು ದಾಖಲೆಗಳನ್ನು ಬರೆದಿರುವ ಸಚಿನ್, ಈ ವರ್ಷದೊಳಗೇ ನಿವೃತ್ತಿಯ ಘೋಷಣೆ ಮಾಡಬಹುದೆ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65